# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | :1204 |
| ಉತ್ತರಿಸಬೇಕಾದ ದಿನಾಂಕ | :15.12.2023 |
| ಸದಸ್ಯರ ಹೆಸರು | :ಶ್ರೀ ಎಸ್ ವ್ಹಿ ಸಂಕನೂರ (ಪದವೀಧರರ ಕ್ಷೇತ್ರ) |
| ಉತ್ತರಿಸುವ ಸಚಿವರು | :ಮಾನ್ಯ ಪರಿಶಿಷ್ಟ ಪಂಗಡಗಳ ಕಲ್ಯಾಣ,<br>ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವರು |

| ಕ್ರಸ | ಪ್ರಶ್ನೆ | ಉತ್ತರ | Reply |
|---|---|---|---|
| ಅ) | ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯಲ್ಲಿ ತರಬೇತುದಾರರ ಹುದ್ದೆಗಳನ್ನು ಸೃಜಿಸಲಾಗಿದೆಯೇ; ಹಾಗಿದ್ದಲ್ಲಿ ಎಷ್ಟು ಹುದ್ದೆಗಳಿಗೆ ಆರ್ಥಿಕ ಇಲಾಖೆಯಿಂದ ಮಂಜೂರಾತಿ ದೊರೆತಿದೆ; (ಮಾಹಿತಿ ನೀಡುವುದು) | ಸರ್ಕಾರದ ಆದೇಶ ಸಂಖ್ಯೆ:ವೈಎಸ್‌ಡಿ-ಇವೈಡಬ್ಲ್ಯು/178/2021; ದಿನಾಂಕ 10.10.2022 ರನ್ವಯ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯಲ್ಲಿ 176 ತಾಲ್ಲೂಕು ತರಬೇತುದಾರರು ಕಂ ಸಂಯೋಜಕರ (Taluka Coach cum Co-ordinator) ಹುದ್ದೆಗಳನ್ನು ಆರ್ಥಿಕ ಇಲಾಖೆಯ ಅನುಮೋದನೆಯೊಂದಿಗೆ ಸೃಜಿಸಿ ಆದೇಶಿಸಲಾಗಿದೆ.<br><br>ಸರ್ಕಾರದ ಆದೇಶ ಸಂಖ್ಯೆ:ವೈಎಸ್‌ಡಿ ಇವೈಡಬ್ಲ್ಯು/178/2021(ಭಾಗ-5), ದಿನಾಂಕ 10.02.2023 ರಲ್ಲಿ ತರಬೇತುದಾರರು ಕಂ ಸಂಯೋಜಕರು ವೃಂದದ ಹುದ್ದೆಗಳನ್ನು 03 ವೃಂದಗಳಾಗಿ ವಿಂಗಡಿಸಿ ಆದೇಶಿಸಿದೆ. ವಿವರ ಈ ಕೆಳಕಂಡಂತಿದೆ:<br><br>1. ತಾಲ್ಲೂಕು ಹಿರಿಯ ತರಬೇತುದಾರರು ಕಂ ಸಂಯೋಜಕರು (ವೇತನ ಶ್ರೇಣಿ ರೂ.43100 83900)<br>2. ತಾಲ್ಲೂಕು ಕಿರಿಯ ತರಬೇತುದಾರರು ಕಂ ಸಂಯೋಜಕರು (ಗ್ರೇಡ್-1) (ವೇತನ ಶ್ರೇಣಿ 37900-70850)<br>3. ತಾಲ್ಲೂಕು ಕಿರಿಯ ತರಬೇತುದಾರರು ಕಂ ಸಂಯೋಜಕರು (ಗ್ರೇಡ್-2) (ವೇತನ ಶ್ರೇಣಿ ರೂ.27650-52650) | 176 Taluka Coach cum Co-Ordinator posts have been sanctioned vide Government Order No: YSD-EYW/178/2021; dated 10.10.2022 with the approval of the Finance Department.<br><br>The post of Coaches Cum Coordinators has been divided into 3 groups vide Govt Order No: YSD-EYW/178/2021(Part-5); dated 10.02.2023. The details are as follows:-<br><br>1. Taluk Senior Coaches cum Co Ordinator (Pay Scale Rs 43100-83900)<br>2. Taluk Junior Coaches cum Co-Ordinator (Grade-1) (Pay Scale Rs 37900-70850)<br>3. Taluk Junior Coaches cum Co-Ordinator (Grade-2) (Pay Scale Rs 27650-52650) |

| | | | |
|---|---|---|---|
| ಆ) | ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯಲ್ಲಿ ತರಬೇತುದಾರರ ನೇಮಕಾತಿಗಾಗಿ ಸಿ&ಆರ್ ರೂಪಿಸಲಾಗಿದೆಯೇ; | ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯಲ್ಲಿ ತರಬೇತುದಾರರ ಹುದ್ದೆಗಳ ನೇಮಕಾತಿಗೆ ಕರಡು ವೃಂದ ಮತ್ತು ನೇಮಕಾತಿ ನಿಯಮಗಳನ್ನು ಸರ್ಕಾರದ ಅಧಿಸೂಚನೆ ಸಂಖ್ಯೆ:ವೈಎಸ್‌ಡಿ-ಇವೈಡಬ್ಲ್ಯು/178/2021; ದಿನಾಂಕ 27.03.2023 ರನ್ವಯ ಪ್ರಕಟಿಸಿ ಸಲಹೆ/ಆಕ್ಷೇಪಣೆಗಳನ್ನು ಆಹ್ವಾನಿಸಲಾಗಿರುತ್ತದೆ. ಸ್ವೀಕರಿಸಲಾಗಿರುವ ಸಲಹೆ/ಆಕ್ಷೇಪಣೆಗಳನ್ನು ಕ್ರೋಢೀಕರಿಸಲಾಗಿದ್ದು, ಪ್ರಸ್ತುತ ಸರ್ಕಾರದ ಪರಿಶೀಲನೆಯಲ್ಲಿದೆ. | The draft Cadre and Recruitmer Rules for the recruitment of coaches posts in the Department of Youth Empowerment and Sports have been published vide Government Notification No: YSD-EYW/178/2021 on 27.03.2023 and suggestions/ objections were invited. The suggestions/objections received have been consolidated and are currently under the consideration of the Government. |
| ಇ) | ಹಾಗಿದ್ದಲ್ಲಿ, ಕರ್ನಾಟಕ ಕ್ರೀಡಾ ಪ್ರಾಧಿಕಾರದಲ್ಲಿ' ನೇಮಕವಾಗಿ 25 ವರ್ಷಗಳಿಂದ ಸೇವೆ ಸಲ್ಲಿಸುತ್ತಿರುವ ತರಬೇತಿದಾರರನ್ನು ಇಲಾಖೆಯಲ್ಲಿ ವಿಲೀನಗೊಳಿಸಲು ನಿಯಮಗಳನ್ನು ರೂಪಿಸಲಾಗಿದೆಯೇ; (ವಿವರವಾದ ಮಾಹಿತಿ ನೀಡುವುದು) | ಪ್ರಕಟಿಸಲಾಗಿರುವ ಕರಡು ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ಅನುಭವಿ ತರಬೇತುದಾರರು ಹಾಗೂ ಸಾಧಕ ಕ್ರೀಡಾಪಟುಗಳನ್ನು ರೂಪಿಸಿದ ತರಬೇತುದಾರರು ಹಾಗೂ ಸಾಧಕ ಕ್ರೀಡಾಪಟುಗಳನ್ನು ಕ್ರೀಡಾ ತರಬೇತುದಾರರಾಗಿ ನೇಮಕ ಮಾಡಲು ಪ್ರಸ್ತಾಪಿಸಲಾಗಿದೆ.<br><br>ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಅನುದಾನಿತ ಸಂಸ್ಥೆಯಾದ ಕರ್ನಾಟಕ ಕ್ರೀಡಾ ಪ್ರಾಧಿಕಾರದಲ್ಲಿ ಮಾಸಿಕ ಸಂಚಿತ ವೇತನ ಆಧಾರದ ಮೇಲೆ ವಿವಿಧ ಕ್ರೀಡಾ ವಿಭಾಗಗಳಲ್ಲಿ ತರಬೇತುದಾರರು ಕಾರ್ಯನಿರ್ವಹಿಸುತ್ತಿದ್ದಾರೆ.<br><br>ಸರ್ಕಾರದ ಪತ್ರ ಸಂಖ್ಯೆ:ಯುಸೇಇ 73 ಯುಇಸೇ 2017; ದಿನಾಂಕ 08.07.2019 ರಲ್ಲಿ ಶ್ರೀಮತಿ ಉಮಾದೇವಿ ಪ್ರಕರಣದಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯವು ನೀಡಿರುವ ತೀರ್ಪಿನ ಹಿನ್ನೆಲೆಯಲ್ಲಿ ಕರ್ನಾಟಕ ಕ್ರೀಡಾ ಪ್ರಾಧಿಕಾರದ ತರಬೇತುದಾರರನ್ನು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯಲ್ಲಿ ಸಕ್ರಮಾತಿ/ವಿಲೀನಾತಿಗೆ ಅವಕಾಶವಿಲ್ಲವೆಂದು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯು ಅಭಿಪ್ರಾಯ ನೀಡಿರುವುದಾಗಿ ತಿಳಿಸಲಾಗಿದೆ. | In the draft Cadre and Recruitment rules published, it is proposed to recruit experienced coaches who have produced champion athletes and sports persons as coaches. Sports Authority of Karnataka being the grant-in-aid organization of the Department of Youth Empowerment and Sports, has coaches working in various disciplines on a monthly consolidated salary basis.<br><br>Government vide its letter No. YuSeE 73 YuESe 2017; dated 08.07.2019 has informed that in view of the judgment given by the Hon'ble Supreme Court in the case of Smt. Umadevi, the Personnel and Administrative Reforms Department has opined that there is no possibility of regularizing or merger of coaches of the Sports Authority of Karnataka in the Department of Youth Empowerment and Sports. In this background, no rules have been framed regarding the merger of |

| | | | |
|---|---|---|---|
| | | ಈ ಹಿನ್ನಲೆಯಲ್ಲಿ ಕರ್ನಾಟಕ ಕ್ರೀಡಾ ಪ್ರಾಧಿಕಾರದ ತರಬೇತುದಾರರನ್ನು ಇಲಾಖೆಯಲ್ಲಿ ವಿಲೀನಗೊಳಿಸುವ ಕುರಿತು ಯಾವುದೇ ನಿಯಮಗಳನ್ನು ರೂಪಿಸಿರುವುದಿಲ್ಲ. | coaches of Sports Authority of Karnataka in the department. |
| ಈ) | ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಹಾಗೂ ಕರ್ನಾಟಕ ಕ್ರೀಡಾ ಪ್ರಾಧಿಕಾರಗಳ ಉದ್ದೇಶಗಳು ಒಂದೇ ಆಗಿರುವ ಹಿನ್ನಲೆಯಲ್ಲಿ ಆರ್ಥಿಕ ಇಲಾಖೆಯ ಸಲಹೆಯಂತೆ ಕರ್ನಾಟಕ ಕ್ರೀಡಾ ಪ್ರಾಧಿಕಾರವನ್ನು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯನ್ನು ವಿಲೀನಗೊಳಿಸಲು ಸರ್ಕಾರ ಚಿಂತನೆ ನಡೆಸಿದೆಯೇ? | ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯ ಅಭಿಪ್ರಾಯದ ಹಿನ್ನೆಲೆಯಲ್ಲಿ ಕರ್ನಾಟಕ ಕ್ರೀಡಾ ಪ್ರಾಧಿಕಾರವನ್ನು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯಲ್ಲಿ ವಿಲೀನಗೊಳಿಸುವ ಯಾವುದೇ ಪ್ರಸ್ತಾವನೆ ಪ್ರಸ್ತುತ ಸರ್ಕಾರದ ಮುಂದಿರುವುದಿಲ್ಲ. | There is no proposal to merge the Sports Authority of Karnataka with the Department of Youth Empowerment and Sports before the Government in view of the opinion given by the Department of Personnel and Administrative Reforms. |

**ಕಡತ ಸಂಖ್ಯೆ: ವೈಎಸ್ ಡಿ /225/ಸಿಡಿಎನ್/2023**

(ಬಿ. ನಾಗೇಂದ್ರ)
ಪರಿಶಿಷ್ಟ ಪಂಗಡಗಳ ಕಲ್ಯಾಣ,
ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವರು